೧೧) ಬೆಂಗಳೂರು ನಗರದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್‌ಪಾಸಂಗಳ ನೀಡಿಕೆಯಲ್ಲಿ ವಿಳಂಬವಾಗಿರುವುದು.

ಶ್ರೀ ಹೆಚ್. ಎಂ. ರೇವಣ್ಣ.— ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸುಗಳ ನೀಡಿಕೆಯಲ್ಲಿ ವಿಳಂಬ ಆಗುತ್ತಿರುವುದರ ಬಗ್ಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

† ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಸಾರಿಗೆ ರಾಜ್ಯ ಸಚಿವರು).— ಮಾನ್ಯ ಉಪಾಧ್ಯಕ್ಷರೆ, ನನ್ನ ಹೇಳಿಕೆ ಈ ರೀತಿ ಇದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸುಗಳನ್ನು ಕೊಡುತ್ತಿದೆ. ಈಗ ಜಾರಿಯಲ್ಲಿರುವ ಪದ್ಧತಿಯ ಪ್ರಕಾರ ವಿದ್ಯಾರ್ಥಿಗಳಿಗೆ ಪಾಸು ಅಪ್ಲಿಕೇಷನ್ ಫಾರಂನ್ನು ಕೊಡಲಾಗುವುದು ಅಪ್ಲಿಕೇಷನ್ ಫಾರಂನ್ನು ಆಯಾ ಶಾಲಾ ಮತ್ತು ಕಾಲೇಜುಗಳಲ್ಲಿ ಪಡೆದು ಅದನ್ನು ಭರ್ತಿ ಮಾಡಿದನಂತರ ಗುರುತಿನ ಚೀಟಿಯನ್ನು ಕೊಡಲಾಗುವುದು. ಗುರುತಿನ ಚೀಟಿಯಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಅರ್ಜಿ ಫಾರಂನ್ನು ನಮ್ಮ ಬಸ್ ಕೌಂಟರ್‌ಗಳಲ್ಲಿ ಕೊಟ್ಟ ಮೇಲೆ ರಿಯಾಯಿತಿ ದರದ ಪಾಸನ್ನು ಸ್ಟ್ಯಾಂಪ್ ಅಂಟಿಸುವುದರ ಮೂಲಕ ಕೊಡಲಾಗುವುದು.

ಈ ಮೊದಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಮೊದಲೇ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಜನೆಗೆ ತೊಂದರೆಯಾಗದಂತೆ ತುರ್ತಾಗಿ ರಿಯಾಯಿತಿ ಪಾಸುಗಳನ್ನು ಕೊಡುವುದಕ್ಕಾಗಿ ೧೦ ಕೌಂಟರ್‌ಗಳನ್ನು ಒದಗಿಸಿದ್ದು, ಈ ವರ್ಷ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಕೌಂಟರುಗಳ ಸಂಖ್ಯೆಯನ್ನು ಈ ಕೆಳಗೆ ತೋರಿಸಲಾದ ರೀತಿಯಲ್ಲಿ ೨೦ಕ್ಕೆ ಹೆಚ್ಚಿಸಲಾಗಿದೆ.

೧.	ಬೆಂಗಳೂರು ಬಸ್ ನಿಲಾ ಣ	೨
೨.	ಸಿಟಿ ಮಾರ್ಕೆಟ್	೩
೩.	ಶಿವಾಜಿನಗರ	೩
೪.	ಅಲಸೂರು	೩
೫.	ಜಯನಗರ	೨
೬.	ಮಲ್ಲೇಶ್ವರಂ	೩
೭.	ಶ್ರೀನಗರ	೧
೮.	ವಿಜಯನಗರ	೨
೯.	ಯಶವಂತಪುರ	೧

ಈಗ ಇರುವ ಪದ್ಧತಿಯ ಪ್ರಕಾರ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೌಂಟರ್‌ಗಳಲ್ಲಿ ಕ್ಯೂ ನಿಲ್ಲಬೇಕಾಗಬಹುದು. ಆದುದರಿಂದ ವಿಳಂಬವಾಗುವ ಸಾಧ್ಯತೆಯಿದೆ.

ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಗಳನ್ನು ಗಮನಿಸಿ ತಾರೀಖು ೧೨-೬-೧೯೯೦ ರಂದು ವಿದ್ಯಾ ಮಂತ್ರಿಗಳು ಮತ್ತು ವಿದ್ಯಾ ಇಲಾಖೆಯ ಅಧಿಕಾರಿಗಳೊಡನೆ ಚರ್ಚೆ ನಡೆಸಿ ಈಗಿರುವ ಕ್ರಮವನ್ನು ಬದಲಾವಣೆ ಮಾಡಲು ನಿರ್ಧರಿಸಲಾಗಿದೆ.

ವಿದ್ಯಾರ್ಥಿಗಳ ತೊಂದರೆಗಳನ್ನು ತಪ್ಪಿಸಲು ಆಗಸ್ಟ್ ೧ ರಿಂದ ಈ ರೀತಿಯ ಪಾಸುಗಳನ್ನು ಆಯಾಯ ಶಾಲಾ ಕಾಲೇಜುಗಳಲ್ಲಿ ಕೊಡಲಾಗುವುದು. ಆಂತಹ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೌಂಟರ್‌ಗಳಲ್ಲಿ ಕಾಯುವ ಅವಶ್ಯಕತೆಯಿರುವುದಿಲ್ಲ. ರಿಯಾಯಿತಿ ದರದ ಪಾಸುಗಳನ್ನು ಕೊಡಲು ಶಾಲಾ ಕಾಲೇಜಿನ ಪ್ರಾಶುಂಪಾಲರು ಅಧಿಕಾರಯುಕ್ತರಾಗಿರುತ್ತಾರೆ.

ಈ ಮೂಲಕ ಆಯಾಯ ಶಾಲೆಗಳಲ್ಲಿ ರಿಯಾಯಿತಿ ಪಾಸುಗಳನ್ನು ನೀಡುವುದರಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೊಂದರೆಗಳು ನಿವಾರಣೆಯಾಗುತ್ತದೆ. ಅಷ್ಟೇ ಅಲ್ಲದೆ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಯಾವುದೇ ತೊಂದರೆಯುಂಟಾಗುವುದಿಲ್ಲ.

† ಶ್ರೀ ಹೆಚ್. ಎಂ. ರೇವಣ್ಣ:— ಮಾನ್ಯ ಸಚಿವರು ಹತ್ತು ಇದ್ದಂಥ ಕೌಂಟರ್‌ಗಳನ್ನು ೨೦ ಮಾಡಿದ್ದೇವೆಂದು ಹೇಳಿದರು. ಬಸ್‌ಪಾಸ್ ಅನ್ನು ಆಯಾಯ ಶಾಲಾ ಕಾಲೇಜುಗಳಲ್ಲಿ ಕೊಡುವುದಕ್ಕೆ ಪ್ರಿನ್ಸಿಪಾಲರುಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅದು ಸ್ವಾಗತಾರ್ಹ. ಆದರೆ ಈ ರೀತಿ ಬಸ್ ಪಾಸ್‌ಗೋಸ್ಕರ ವಿದ್ಯಾರ್ಥಿಗಳು ಕಾಲಹರಣ ಮಾಡುತ್ತಿದ್ದಾರೆ. ಈ ರೀತಿ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು. ಈ ತಿಂಗಳಲ್ಲಿ ಪ್ರಾರಂಭವಾಗುವಂತಹ ಶಾಲಾ ಕಾಲೇಜುಗಳಿಗೆ ಹೊಸದಾಗಿ ಹೆಚ್ಚು ಮಕ್ಕಳು ಸೇರುತ್ತಾರೆ. ಆದುದರಿಂದ ಇನ್ನೂ ಹೆಚ್ಚು ಕೌಂಟರುಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು. ರಿಯಾಯಿತಿ ಬಸ್‌ಪಾಸ್‌ಗಳಿಗೋಸ್ಕರ ವಿದ್ಯಾರ್ಥಿಗಳ ಬಹಳ ದೊಡ್ಡ ಕ್ಯೂ ಇರುತ್ತದೆ. ಆದ್ದರಿಂದ ಇನ್ನೂ ಹೆಚ್ಚಿನ ಕೌಂಟರ್‌ಗಳನ್ನು ತೆರೆಯಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ನನ್ನ ಗಮನಕ್ಕೂ ಬಂದಿದೆ, ಇದರ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನವನ್ನು ಮಾಡಿದ್ದೇವೆ. ತಮಗೆ ಗೊತ್ತಿರುವಂತೆ, ಈ ಬೆಂಗಳೂರು ನಗರದಲ್ಲಿ ಸಾಕಷ್ಟು ಶಾಲಾ ಕಾಲೇಜುಗಳಿವೆ. ಅಷ್ಟೊಂದು ಮಕ್ಕಳಿಗೆ ಪಾಸ್ ಕೊಡಬೇಕಾದರೆ ೨೦ ಅಲ್ಲ, ೩೦ ಕೌಂಟರ್‌ಗಳನ್ನು ತೆರೆದರೂ ಕೂಡ ಅದು ಕಡಿಮೆಯೇ ಆಗುತ್ತದೆ. ಮಕ್ಕಳೂ ಕ್ಯೂ ನಿಲ್ಲಲೇಬೇಕಾಗುತ್ತದೆ. ಆದ್ದರಿಂದ ನಾವು ಈಗಾಗಲೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ಪದ್ಧತಿ ಬದಲಾಯಿಸಬೇಕಾದರೆ ನಮ್ಮ ಪ್ರಿನ್ಸಿಪಾಲರುಗಳಿಗೆ ಸ್ವಲ್ಪ ಟ್ರೈನಿಂಗ್ ಬೇಕಾಗುತ್ತದೆ. ಅದಕ್ಕೆ ಎರಡು ತಿಂಗಳು ಟ್ರೈನಿಂಗ್ ಕೊಟ್ಟು ಆಗಸ್ಟ್ ಒಂದರಿಂದ ಈ ಒಂದು ತೀರ್ಮಾನವನ್ನು ಜಾರಿಗೆ ತರಲಾಗುವುದು.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಹೇಳಬಯಸುತ್ತೇನೆ. ತಮಗೆ ಗೊತ್ತಿರುವ ಹಾಗೆ, ೧೯೮೩ರಲ್ಲಿ ಈ ಶಾಲಾ ಮಕ್ಕಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ನೀಡಲು ಗೊತ್ತು ಮಾಡಿದ್ದು. ಅವತ್ತು ಏನು ಫಿಕ್ಸ್ ಮಾಡಿದ್ದರು ಎಂದರೆ ೧೨ ವರ್ಷಕ್ಕಿಂತ ಕೆಳಗಡೆ ಇರತಕ್ಕ ವಿದ್ಯಾರ್ಥಿಗಳಿಗೆ ಫ್ರೀ ಪಾಸ್ ಕೊಡುವುದು ಮತ್ತು ೧೨ ವರ್ಷಕ್ಕಿಂತ ಹೆಚ್ಚಿನವರಿಗೆ ಅಂದರೆ ೧೦ನೇ ತರಗತಿಯವರೆಗೆ ಹೋಗತಕ್ಕ ಮಕ್ಕಳಿಗೆ ತಿಂಗಳಿಗೆ ೫ ರೂಪಾಯಿಯಂತೆ ಪಾಸ್ ಕೊಡುತ್ತಿದ್ದರು. ಕಾಲೇಜಿನ ಮಕ್ಕಳಿಗೆ ೧೦ ಕಿಲೋ ಮೀಟರ್‌ವರೆಗೆ ೧೦ ರೂಪಾಯಿ ಪ್ರತಿ ತಿಂಗಳಿಗೆ, ಮತ್ತು ೧೦ ಕಿಲೋಮೀಟರ್‌ನಿಂದ ೪೦ ಕಿಲೋ ಮೀಟರ್‌ವರೆಗೆ ೧೫ ರೂಪಾಯಿ ಎಂದು ಫಿಕ್ಸ್ ಮಾಡಿದ್ದೇವೆ. ಇನ್ನೂ ಕಡಿಮೆ ಮಾಡಬೇಕೆಂದು ಬೇಡಿಕೆಗಳು ಬರುತ್ತಿವೆ. ಆದರೆ ಈಗಾಗಲೇ ಈ ಬಾಬಿನಲ್ಲಿ ನಮ್ಮ ಸಂಸ್ಥೆ ೩೦ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ. ಈ ವರ್ಷ ಇನ್ನೂ ಹೆಚ್ಚಿನ ಲಾಸ್ ಬರತಕ್ಕ ಸಂಭವ ಇದೆ. ನಾನು ತಮ್ಮಲ್ಲಿ ಬೇಡಿಕೆ ಮಾಡುತ್ತಿದ್ದೇನೆ. ಈಗ ಈ ರಿಯಾಯಿತಿ ಪಾಸ್‌ಗೆ ಎಷ್ಟು ಫಿಕ್ಸ್ ಮಾಡಬೇಕೆಂಬ ಬಗ್ಗೆ ಚರ್ಚೆಯಾಗಬೇಕಾಗಿದೆ. ಇನ್ನೊಂದು ವಿಚಾರ ಏನೆಂದರೆ, ವಿದ್ಯಾರ್ಥಿಗಳಿಗೆ ಬೆಳಗಿನಿಂದ ಸಂಜೆಯವರೆಗೂ ಪಾಸ್ ಉಪಯೋಗಿಸಿಕೊಳ್ಳಲು ಅವಕಾಶ ಕೊಡಬೇಕೇ, ಬೇಡವೇ ಎಂಬುದನ್ನೂ ಯೋಚನೆ ಮಾಡಬೇಕಾಗಿದೆ. ನಾವು ಸಾಮಾನ್ಯವಾಗಿ ಎಲ್ಲ ರೀತಿಯಿಂದಲೂ ಯೋಚನೆ ಮಾಡಬೇಕಾಗುತ್ತದೆ. ಶಾಲಾ ಮಕ್ಕಳಿಗೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಮಾತ್ರ ಪಾಸ್ ಉಪಯೋಗಿಸಿಕೊಳ್ಳಲು ಅವಕಾಶ ಕೊಡುವುದು ಸೂಕ್ತ. ಬೆಳಿಗ್ಗೆಯಿಂದ ಸಂಜೆಯವರೆಗೂ ಪಾಸ್ ಉಪಯೋಗಿಸಿಕೊಳ್ಳಲು ಅವಕಾಶ ಕೊಟ್ಟರೆ ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುವುದರ ಜೊತೆಗೆ ಕೆ.ಎಸ್.ಆರ್.ಟಿ.ಸಿ.ಗೂ ಕೂಡ ನಷ್ಟ ಜಾಸ್ತಿಯಾಗುತ್ತದೆ. ನಾವು ಅನ್ ರಿಸ್ಟ್ರಿಕ್ಟೆಡ್ ಪಾಸ್ ಎಂದು ಕೊಡುವುದು ದುರುಪಯೋಗವಾಗುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ಮುಖ್ಯವಾಗಿ ಚರ್ಚೆಯಾಗಬೇಕಾಗಿದೆ ಈ ವಿಚಾರದಲ್ಲಿ ವಿದ್ಯಾರ್ಥಿ ಮುಖಂಡರ ಜೊತೆ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ವಿದ್ಯಾರ್ಥಿಗಳಿಗೆ ಪಾಸ್ ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ಅದು ದುರುಪಯೋಗವಾಗಬಾರದು. ಇದು ನಮ್ಮ ಉದ್ದೇಶ.

ಶ್ರೀ ರಾಮಲಿಂಗರೆಡ್ಡಿ.— ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಮಂತ್ರಿಗಳು ಶಾಲಾ ಕಾಲೇಜುಗಳ ಪ್ರಿನ್ಸಿಪಾಲರಿಗೆ ಪಾಸ್ ಕೊಡತಕ್ಕ ಅಧಿಕಾರ ಕೊಡುತ್ತೇವೆಂದು ಹೇಳಿದ್ದಾರೆ. ನಿಜವಾಗಿಯೂ ಇದರಲ್ಲಿ ದುರುಪಯೋಗವಾಗುತ್ತದೆ, ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆಂದು ತಾವು ಹೇಳಿದಿರಿ. ತಾವು ಹೇಳುತ್ತಿರುವುದು ಸತ್ಯ. ದುರುಪಯೋಗವಾಗುತ್ತಿರುವುದನ್ನು ತಡೆಗಟ್ಟಬೇಕಾದ್ದು ಬಹಳ ಮುಖ್ಯ. ವಿದ್ಯಾರ್ಥಿಗಳ ಹೆಸರಿನಲ್ಲಿ ಅನೇಕ ಜನ ಪಾಸುಗಳನ್ನು ಮಾಡಿಸಿಕೊಂಡು ದುರುಪಯೋಗ ವಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದು ದುರುಪಯೋಗ ಆಗಬಾರದು ಎಂದು ನನ್ನ ಭಾವನೆ.

ಶ್ರೀ ಕೆ. ಜೆ. ಜಾರ್ಜ್.— ಈಗಿರತಕ್ಕ ಪದ್ಧತಿಯ ಪ್ರಕಾರ ಪಾಸ್‌ಗಳ ದುರುಪಯೋಗ ಜಾಸ್ತಿ ಆಗುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಶಾಲಾ ಕಾಲೇಜುಗಳ ಪ್ರಿನ್ಸಿಪಾಲರು ಸಹಿ ಮಾಡಿ ಕಳಿಸುತ್ತಾರೆ, ನಮ್ಮ ಕೌಂಟರಿನಲ್ಲಿ ಪಾಸ್ ಕೊಡುತ್ತಾರೆ. ಆದ್ದರಿಂದಲೇ ನಾವು ಈಗ ಜಾರಿಯಲ್ಲಿ ತರಬೇಕಾಗಿರುವ ಪದ್ಧತಿ ಏನೆಂದರೆ, ಆ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿರುತ್ತಾರೆ ಅವರ ಜವಾಬ್ದಾರಿಯನ್ನು ಆ ಪ್ರಿನ್ಸಿಪಾಲರು ತಗೆದುಕೊಳ್ಳುತ್ತಾರೆ. ಆದುದರಿಂದ ಪಾಸ್‌ಗಳ ದುರುಪಯೋಗ ಕಡಿಮೆಯಾಗಬಹುದು.

ಶ್ರೀ ಹೆಚ್. ಎಂ. ರೇವಣ್ಣ.— ಸರ್ಕಾರಿ ಬಸ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಪಾಸನ್ನು ಕೊಡುತ್ತಿದ್ದಾರೆ. ಆದರೆ ನಾನು ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ ಬಂದಿರುವುದರಿಂದ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತಿದ್ದೇನೆ. ಅನೇಕ ವಿದ್ಯಾರ್ಥಿಗಳು ಸುಮಾರು ೪೦–೫೦ ಕಿಲೋಮೀಟರ್ ದೂರದಲ್ಲಿರುವ ಹಳ್ಳಿಗಳಿಂದ ಪಟ್ಟಣಕ್ಕೆ ಬರುತ್ತಿದ್ದಾರೆ. ಅಲ್ಲಿ ಖಾಸಗಿ ಬಸ್ಸುಗಳು ಓಡಾಡುತ್ತಿರುವುದರಿಂದ ಖಾಸಗಿ ಬಸ್‌ಗಳವರು ಪಾಸ್‌ಗಳನ್ನು ಕೊಡುತ್ತಾ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಸಾರಿಗೆ ಕಮಿಷನರಿಗೆ ಅಥವಾ ಸಂಬಂಧಪಟ್ಟ ಡಿ.ಸಿ.ಯವರಿಗೆ ತಿಳಿಸಿ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಖಾಸಗಿ ಬಸ್‌ಗಳಲ್ಲೂ ಕೂಡ ಈ ಒಂದು ಫೆಸಿಲಿಟಿ ಮಾಡಿಕೊಡಬೇಕೆಂದು ಈ ಸಭೆಯ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಈಗ ಖಾಸಗಿ ಬಸ್‌ನವರು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ಕೊಡುವುದಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ. ಈ ವಿಚಾರವನ್ನು ಸನ್ಮಾನ್ಯ ಸದಸ್ಯರಾದ ರೇವಣ್ಣನವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ನಾವು ಅವರೊಡನೆ ಚರ್ಚೆ ಮಾಡಬೇಕಾಗಿದೆ. ಚರ್ಚೆ ಮಾಡುವುದಕ್ಕೆ ನಾನು ಆದೇಶವನ್ನು ನಮ್ಮ ಅಧಿಕಾರಿಗಳಿಗೆ ಕೊಡುತ್ತೇನೆ. ಈಗ ಕೆ.ಎಸ್.ಆರ್ ಟಿ.ಸಿ ಗೆ ಇನ್ನೊಂದು ತೊಂದರೆ ಏನಾಗಿದೆ ಎಂದರೆ, ಖಾಸಗಿಯವರು ಯಾವಾಗ ರಿಯಾಯಿತಿ ದರದಲ್ಲಿ ಬಸ್ ಪಾಸ್ ಕೊಡುವುದಿಲ್ಲ ಆಗ ಎಲ್ಲ ಕಡೆಯ ಶಾಸಕರಿಂದಲೂ ಮತ್ತು ಸಾರ್ವಜನಿಕವಾಗಿಯೂ ಬೇಡಿಕೆ ಏನು ಬರುತ್ತದೆ ಅಂದರೆ ಶಾಲೆಗಳಿಗೆ ಇರುವ ಕಡೆ ಕೆ.ಎಸ್.ಆರ್ ಟಿ.ಸಿ. ಬಸ್‌ಗಳನ್ನು ಓಡಿಸಿ ಎಂದು. ಬರೀ ಶಾಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದಕ್ಕೋಸ್ಕರವಾಗಿ ಮಾತ್ರ ಕೆ. ಎಸ್..ಆರ್. ಟಿ. ಸಿ ಬಸ್‌ಗಳನ್ನು ಓಡಿಸಬೇಕೆಂದರೆ ನಮಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ನಾನು ನಮ್ಮ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ಅವರೊಡನೆ ಚರ್ಚೆಮಾಡಿ ಯಾವ ತೀರ್ಮಾನವನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಡುತ್ತೇನೆ.

ಶಿಷ್ಟಾಚಾರ ನಿಯಮದ ವೇರೆಗೆ

೧) ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದ ನಷ್ಟವುಂಟಾಗಿರುವುದರಿಂದ ಪರಿಹಾರಕ್ಕಾಗಿ ಒತ್ತಾಯಂ.

ಶ್ರೀ ಬಿ. ಜೆ. ಯಳ್ಳಿಗುತ್ತಿ (ಬೀಳ್ಗಿ).–ಮಾನ್ಯ ಸಭಾಧ್ಯಕ್ಷಣಿಯವರೆ, ವಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಮಂಡಳ ವ್ಯಾಪ್ತಿಯಲ್ಲಿ ಬರುವ ಬಾಬಿ ಬೀಳಗಿ ಗ್ರಾಮದ ಎರಡು ಕೆರೆಗಳು ದಿನಾಂಕ ೨೬–೫–೮೮ರಂದು ಭಾರೀ ಮಳೆಯಿಂದಾಗಿ ತುಂಬಿ ಹರಿದು, ಕೆರೆಯು ಒಡೆದ ಪರಿಣಾಮವಾಗಿ ಕುರಗೋಡ ಹಾಗೂ ಸಾವಳಗಿ ಗ್ರಾಮದ ಜನರ ಆಸ್ತಿಗಳಿಗೆ ಬಹಳಷ್ಟು ನಷ್ಟ ಉಂಟಾಗಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ಈ ಕೂಡಲೇ ಸರ್ಕಾರದವರು ಈ ಗಂಭೀರ ವಿಷಯದ ಬಗ್ಗೆ ಸೂಕ್ತ ರೀತಿಯ ರಿಪೇರಿ ಮಾಡುವ ಕ್ರಮ ಕೈಗೊಳ್ಳಲು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಮತ್ತು ಬಾವಿ ಪಂಪುಸೆಟ್ಟು ಮುಳುಗಿದ ಜನರಿಗೆ ಪರಿಹಾರ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು) —ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಉತ್ತರ ಒದಗಿಸುತ್ತೇನೆ.